ನಿಮ್ಮ ಮೈಯ ಬೆವರಿನ ವಾಸನೆ ಆಗುವುದಿಲ್ಲ. ವಾಂತಿ ಬಂದ ಹಾಗೆ ಆಗುತ್ತದೆ. ನನ್ನನ್ನು ಯಾಕೆ ನಿಮ್ಮಂಥವರಿಗೆ ಮದುವೆ ಮಾಡಿಕೊಟ್ಟರೋ ಆ ದೇವರಿಗೆ ಗೊತ್ತು. ಈ ಕಾಡಿನಲ್ಲಿ ಇರುವುದು ಹೇಗೆ? ನಾನು ಅಪ್ಪಯ್ಯಗೆ ಹೇಳಿದೆ, ಬೇಡ ಅಂತ. ಆದರೆ, ಅವರು ಕೇಳಲಿಲ್ಲ. ಹೊಸನಗರ ಪೇಟೆಯೇ ಬೇರೆ, ಈ ಕಾಡೇ ಬೇರೆ. ಅಸಹ್ಯವಾಗುತ್ತದೆ. ರಾತ್ರಿ ಸ್ನಾನವನ್ನೂ ಮಾಡುವುದಿಲ್ಲ. ಅದರ ಮೇಲೆ ರಾತ್ರಿ ಎಲೆ ಅಡಿಕೆ. ಹೊಗೆಸೊಪ್ಪು. ಇನ್ನು ನೀವು ನನ್ನ ಹತ್ತಿರ ಬರಬೇಕು ಅಂತ ಇದ್ದರೆ ಮೊದಲು ರಾತ್ರಿ ಸ್ನಾನ ಮಾಡಲು ಕಲಿಯಿರಿ.”



ನಾರಣಪ್ಪ ಅದನ್ನು ಅಷ್ಟು ಗಂಭೀರವಾಗಿ ಪರಿಗಣಿಸಲಿಲ್ಲ. ಹೇಗೂ ಮನೆಯಲ್ಲಿ ಬೇರೆ ಯಾರೂ ಇಲ್ಲ. ಮತ್ತೆ ಅದೇ ಚಿತ್ರ. ಅದೇ ಮಾತು. ಆ ರಾತ್ರಿ ಮಾತ್ರ ಅವನ ಮನಸ್ಸಿನ ಹದವನ್ನು ಕೆಡಿಸಿತು. ಆದದ್ದು ಇಷ್ಟು: ರಾತ್ರಿ ನಾರಣಪ್ಪ ಲಲಿತೆಯ ಹತ್ರ ಹೋದ. ಅವಳ ಪಕ್ಕದಲ್ಲಿ ಮಲಗಿದ. ಇನ್ನೇನು ಅವಳನ್ನು ಮುಟ್ಟಬೇಕು ಎಂದು ಅನಿಸುವಾಗಲೇ ಲಲಿತೆ ಅವನ ಕೈಯನ್ನು ತೆಗೆದು ಹೇಳಿದಳು, “ನಿಮ್ಗೆ ಬುದ್ಧಿ ಇದೆಯೋ ಅಥವಾ ಇಲ್ಲವೋ. ಒಳ್ಳೆ ಹಂದಿಯ ಹಾಗೆ ಇದ್ದೀರಿ. ಅಪ್ಪ ಅಮ್ಮ ಒತ್ತಾಯ ಮಾಡದೇ ಹೋಗಿದ್ದರೆ ನಿಮ್ಮನ್ನು ಯಾರು ಮದುವೆಯಾಗುತ್ತಿದ್ದರು. ನಿಮಗೆ ರಾತ್ರಿ ಸ್ನಾನ ಮಾಡುವ ಅಭ್ಯಾಸವೇ ಇಲ್ವಾ? ನನ್ನ ಕರ್ಮ. ನೀವಂತೂ ಒಂದು ಕೋಲಿಗೆ ಸೀರೆ ಉಡಿಸಿದರೆ ಅದನ್ನೂ ಅಪ್ಪುವವರೇ ಎಂದು ಕಾಣುತ್ತದೆ. ನಿಮ್ಮನ್ನು ನೋಡಿದರೆ ನನಗೆ ಬೇಡುವವರ ಹಾಗೆ ಕಾಣುತ್ತದೆ”. ನಾರಣಪ್ಪ ಏನೂ ಮಾಡಲು ತಿಳಿಯದೆ ಸುಮ್ಮನೆ ಕುಳಿತ. ಅವಳು ತನ್ನ ಸಹಸ್ರ ನಾಮಾರ್ಚನೆ ಮಾಡಿದಳು. ಅದರಲ್ಲಿ ಒಂದು ಮಾತು ಮಾತ್ರ ಮತ್ತೆ ಮತ್ತೆ ಬಂತು. “ನೀವು ಹಂದಿ.” “ಹೆಣ್ಣು ಸಿಕ್ಕಿದರೆ ನೀವು ಏನೂ ಮಾಡುತ್ತೀರಿ.” “ಅದರಲ್ಲಿಯೂ ಭಿಕ್ಷುಕರ ಹಾಗೆ ಇರುವ ನೀವು ಎಲ್ಲಿ, ನನ್ನ ತಾಯಿಮನೆ ಎಲ್ಲಿ?'' “ನಿಮಗೆ ಮಾನ ಮರ್ಯಾದೆ ಎನ್ನುವುದು ಇದೆಯಾ?” ನಾರಣಪ್ಪ ಯಾವುದಕ್ಕೂ ಮಾತಾಡಲಿಲ್ಲ. ಅವಳು ಬೈಯುತ್ತಲೇ ಇದ್ದಳು. ನಾನು ನಿಜವಾಗಿಯೂ ಸೋತಿದ್ದೇನೆ ಎಂದು ಅವನಿಗೆ ಅನಿಸಿತು. ಒಂದುಕ್ಷಣ ಕಾಲು ನಡುಗತೊಡಗಿತು. ಅವನಿಗೆ ಇದು ಅನೂಹ್ಯ. ಅವಳು ಹೇಳಿದ್ದು ಸತ್ಯವೇ ಇರಬಹುದು. ತನ್ನ ಮೈಯೇ ಅವಳಿಗೆ ಅಸಹ್ಯವಾದರೆ ತಾನು ಈಗ ಏನು ಮಾಡಬೇಕು? ಬೈಯುವುದು ಮತ್ತು ಅಳುವುದು ಒಟ್ಟಿಗೆ ಮಾಡಿದ ಲಲಿತಳ ಬಗ್ಗೆ ಪಾಪ ಎಂದು ಅನಿಸಿತು. ಮಂಚದಲ್ಲಿ ಕುಳಿತು ಅವಳು ತನ್ನ ಮಾತುಗಳನ್ನು ಹೇಳುತ್ತಿರುವಾಗ ನಾರಣಪ್ಪ ಮಾಡನ್ನು ನೋಡುತ್ತಾ ಇದ್ದ. ಕಳೆದ ದಿನಗಳು ನೆನಪಾದವು. ಲಲಿತ ತನ್ನ ಹೆಂಡತಿಯಾದದ್ದು ಮದುವೆ ಬ್ರೋಕರ್ ರಾಮ ಭಟ್ಟನ ಮಾತಿನಿಂದ. ಅವನು ತನ್ನ ಬಣ್ಣ ಬಣ್ಣದ ಮಾತುಗಳಿಂದ ಅವಳ ತಂದೆಯನ್ನು ಒಪ್ಪಿಸಿದ್ದ. ಅದರ ಜೊತೆಗೆ ತನ್ನ ಬಗ್ಗೆ ರಾಮ ಭಟ್ಟ ಎಲ್ಲಾ ವಿವರವನ್ನು ಹೇಳಿರಲಿಲ್ಲ. ಅವನನ್ನು ರಾಮಣ್ಣ ಎಂದು ಹೇಳುವುದೇ ಹೆಚ್ಚು. ರಾಮಣ್ಣ ಎಂದರೆ ಪ್ರಳಯಾಂತಕ. ಅವನ ಕೈಚೀಲದ ತುಂಬಾ ಇರುವುದು ಗಂಡು ಮತ್ತು ಹೆಣ್ಣುಮಕ್ಕಳ ಜಾತಕ. ಅವನು ತಾನೇ ಜಾತಕ ಪ್ರವೀಣ ಎಂದುಕೊಂಡವನೂ ಹೌದು. ಒಂದು ಮದುವೆ ಮಾಡಿಸಲು ನೂರು ಸುಳ್ಳು ಹೇಳಬಹುದು ಎನ್ನುವುದು ಅವನ ಸಿದ್ಧಾಂತ. ಅಗತ್ಯ ಬಿದ್ದರೆ ಖೊಟ್ಟಿ ಜಾತಕ ಬರೆಯುತ್ತಾನೆ. ಉಬ್ಬು ಹಲ್ಲು. ಅವನ ಮಾತು ಮಾತ್ರ ಹಲ್ಲಿನಿಂದ ಹೊರಗೆ ಬರುವುದೇ ಹೆಚ್ಚು. ಮಾತಾಡುವುದನ್ನು ನಿಲ್ಲಿಸಲಾರ. ನಾವು ಮಾತಿನಲ್ಲಿಯೇ ಅರಮನೆಯನ್ನು ಕಟ್ಟಬೇಕು. ಅದು ನಮ್ಮ ಕೆಲಸದ ಅಗತ್ಯ. ಮತ್ತೆ ಈ ಜಾತಕ ಮತ್ತೊಂದು, ಮಗದೊಂದು ಎನ್ನುವುದೇ ಸುಳ್ಳು. ಜನ ನಂಬುತ್ತಾರೆ. ಅವರಿಗೆ ಬೇಕಾದ ಹಾಗೆ ಜಾತಕ ಬರೆದು ಕೊಡುವುದು ಮಾತ್ರವೇ ನಮ್ಮ ಕೆಲಸ. ಸುಳ್ಳು ಜಾತಕ ಬರೆದು ಎಷ್ಟು ಜನರಿಗೆ ಮದುವೆ ಮಾಡಿಸಿದ್ದೇನೆ ಎನ್ನುವುದಕ್ಕೆ ಲೆಕ್ಕವೇ ಇಲ್ಲ. ಜಾತಕ ಸರಿಯಿದ್ದೂ ಮದುವೆಯಾದವರಲ್ಲಿ